ಶ್ರೀ ಸಿ.ಎಂ. ಉದಾಸಿ : ಆಯಿತು.

ಅಧ್ಯಕ್ಷರು : ನಾಳೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ನಾನೂ ಹೇಳಿದ್ದೇನೆ.

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ : ಕೃಷ್ಣಾ ನದಿಗೆ, ದೂಧ್‌ಗಂಗಾ ನದಿಗೆ ಸುಮಾರು 30 ಫೀಟ್ ಆಂದರೆ 9 ಅಡಿ ನೀರು ಹರಿಯುತ್ತದೆ. ಈಗ ಆ ನದಿಯಲ್ಲಿ ಮರಳು ತೆಗೆಯುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತಾರೆ.

ಅಧ್ಯಕ್ಷರು : ನಾಳೆ ಉತ್ತರ ಕೊಡಲಿ.

ಶ್ರೀ ಹುಕ್ಕೇರಿ ಪ್ರಕಾಶ ಬಾಬಣ್ಣ : ಅಲ್ಲಿ ಬೋಟ್‌ನಲ್ಲಿ ಮರಳು ತೆಗೆಯುವುದಕ್ಕೆ ಸಾಧ್ಯವಿದೆಯೇ? ನೀವೇ ಹೇಳಿ.

ಅಧ್ಯಕ್ಷರು : ನಾಳೆ ಅವರು ಉತ್ತರ ಕೊಡಲಿ.

ಶ್ರೀ ಸಿ.ಎಂ. ಉದಾಸಿ : ಈ ಆಜ್ಞೆಯನ್ನು suo-moto ಮಾಡಿದ್ದಲ್ಲ. ನ್ಯಾಯಾಲಯದ ತೀರ್ಪಿನ ಪ್ರಕಾರ ಆಗಿದೆ.

ಅಧ್ಯಕ್ಷರು : ಆಯಿತು, ನಾಳೆ ಉತ್ತರ ಕೊಡಿ.

ಶ್ರೀ ಸಿ.ಎಂ. ಉದಾಸಿ : ನಾಳೆ ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ಹುಕ್ಕೇರಿ ಪ್ರಕಾಶ ಬಾಬಣ್ಣ : ನ್ಯಾಯಾಲಯದ ತೀರ್ಪು ತೆಗೆದುಕೊಂಡು ನಾವೇನು ಮಾಡುವುದು? ನ್ಯಾಯಾಲಯದ ತೀರ್ಪು ನಮಗೆ ಬೇಕಾಗಿಲ್ಲ. ತಾವು ಮಾನವೀಯತೆಯ ದೃಷ್ಟಿಯಿಂದ ಅದರ ಬಗ್ಗೆ ಯಾವ ನಿರ್ಣಯ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ನಾವು ಸಭಾಧ್ಯಕ್ಷರ ಗಮನಕ್ಕೆ ತಂದಿದ್ದೇವೆ. ದಯವಿಟ್ಟು ನೀವು ಅದರ ಬಗ್ಗೆ ಹೇಳಿಕೆ ಕೊಡಬೇಕು. ನ್ಯಾಯಾಲಯದ ತೀರ್ಪು ತೆಗೆದುಕೊಂಡು ಏನು ಮಾಡುವುದು?

ಅಧ್ಯಕ್ಷರು : ಈ ವಿಷಯವನ್ನು ನಾನು ಈಗ ಮುಗಿಸಿದ್ದೇನೆ. ನಾಳೆ ತೆಗೆದುಕೊಳ್ಳೋಣ.

2. ವಿಷಯ: ರಾಜ್ಯದಲ್ಲಿ ಹರಡುತ್ತಿರುವ ಡೆಂಗ್ಯು ಜ್ವರದ ಕುರಿತು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಡೆಂಗ್ಯು ಜ್ವರ ರಾಜ್ಯದ ಅನೇಕ ಭಾಗಗಳಲ್ಲಿ ಹರಡಿದೆ. ಅನೇಕ ಜನರು ಈ ಜ್ವರಕ್ಕೆ ತುತ್ತಾಗಿ ತೊಂದರೆ ಅನುಭವಿಸುತ್ತಿದ್ದಾರೆ. ನಾನು ಇವತ್ತು

ಕೂಡ, ಡೆಂಗ್ಯು ಜ್ವರದಿಂದ ಆನೇಕಲ್‌ನಲ್ಲಿ ಶಾಲೆಗೆ ಹೋಗುವ ಮಕ್ಕಳು ಸತ್ತು ಹೋಗಿರುವ ಬಗ್ಗೆ ಪತ್ರಿಕೆಯಲ್ಲಿ ಓದಿದೆ. ಇದರ ಬಗ್ಗೆ Health Minister ರವರ ಗಮನ ಸಳೆಯುತ್ತೇನೆ. ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡು, ಜನರಿಗೆ ಪರಿಹಾರ ಕೊಡತಕ್ಕಂಥದ್ದು, ಈ ಕಾಯಿಲೆ ತಡೆಗಟ್ಟುವಂಥದ್ದನ್ನು ಮಾಡಬೇಕು. ಇಲ್ಲದೇ ಹೋದರೆ, ಬಹಳ ಜನ ಶಾಲೆಗೆ ಹೋಗುವ ಮಕ್ಕಳು, ಕೂಲಿ ಕಾರ್ಮಿಕರು ಇಂಥ ಜ್ವರಕ್ಕೆ ತುತ್ತಾದರೆ ಬಹಳ ಕಷ್ಟ ಅನುಭವಿಸಬೇಕಾಗುತ್ತದೆ. ಕೂಡಲೇ ಇದರ ಬಗ್ಗೆ ನೀವು ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ಬಗ್ಗೆ ಹೇಳಬೇಕು. ಇದು ನಿನ್ನೆ ಮೊನ್ನೆಯದ್ದಲ್ಲ. ಸುಮಾರು ದಿನಗಳಿಂದ ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಇದರ ಬಗ್ಗೆ ನೀವು ಕೂಡಲೇ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ಬಗ್ಗೆ ಮತ್ತು ಇದನ್ನು ತಡೆಗಟ್ಟಲಿಕ್ಕೆ ಏನು ಮಾಡಬೇಕೆನ್ನುವ ಬಗ್ಗೆ ಸರ್ಕಾರ ಯಾವ ಯೋಚನೆ ಮಾಡಿದೆ ಎಂಬುದನ್ನು ತಿಳಿಸಬೇಕೆಂದು ನಾನು ಒತ್ತಾಯಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಪ್ರಸ್ತಾಪವಾದ ಈ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಡೆಂಗ್ಯು ಜ್ವರ ಕಾಣಿಸಿಕೊಂಡಿದ್ದು, ಬಹಳಷ್ಟು ಜನರು ನರ್ಸಿಂಗ್ ಹೋಂಗಳಲ್ಲಿ ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ. ಇದು ತಮ್ಮ ಗಮನಕ್ಕೂ ಬಂದಿರಬಹುದು. ನನ್ನ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ ಮತ್ತು ರಾಜಾಜಿನಗರ ವಿಧಾನಸಭಾ ಕ್ಷೇತ್ರ ಮತ್ತು ಈ ಭಾಗದಲ್ಲಿ ಸಂಪೂರ್ಣವಾಗಿ ಈ ಕಸದ ವಿಲೇವಾರಿ ಸಮರ್ಪಕವಾಗಿ ಆಗುತ್ತಿಲ್ಲ. Sanitary ನೀರನ್ನು ಇವತ್ತು ಸಹ ಮಳೆ ನೀರು ಕಾಲುವೆಗೆ ಬಿಡುತ್ತಿದ್ದಾರೆ. ಬಹುಶಃ ಸರ್ಕಾರ ಉತ್ತರ ಕೊಡಬೇಕು. ಇವೆಲ್ಲದಕ್ಕೂ ಸಂಕಟ ಬಂದಾಗ ವೆಂಕಟರಮಣ ಎನ್ನುವ ಹಾಗೆ ಪ್ರತಿ ಸಾರಿ ಡೆಂಗ್ಯು ಮರುಕಳಿಸುತ್ತಿದೆ. ಡೆಂಗ್ಯು ನಿಯಂತ್ರಣಕ್ಕೆ ಸೊಳ್ಳೆ ನಿಯಂತ್ರಣಕ್ಕೆ ಸಮಗ್ರವಾಗಿ ಯಾವ ಯೋಜನೆ ಹಾಕಿಕೊಂಡಿದ್ದೀರಿ? ಈ ಡೆಂಗ್ಯು ಜ್ವರ ಬಡವರಿಗೇನಾದರೂ ಬಂದರೆ ಕಷ್ಟ. ಅದಕ್ಕೆ ಲಕ್ಷ ರೂಪಾಯಿ ಲೆಕ್ಕಕ್ಕಿಲ್ಲ ಎನ್ನುವ ಹಾಗಾಗಿದೆ. Platelets ತರಬೇಕಾದರೆ ಕಷ್ಟವಿದೆ. ಅದು

ದೇವರಿಗೇ ಗೊತ್ತು. ಈ ಖರ್ಚುಗಳನ್ನು ಸರ್ಕಾರ ಭರಿಸುತ್ತದೆಯೇ? ಇದನ್ನು ನಿಯಂತ್ರಣ ಮಾಡುತ್ತೀರಾ? ಜನರಿಗೆ ಹೇಗೆ ರಕ್ಷಣೆ ಕೊಡುತ್ತೀರಿ? ಇದರ ಬಗ್ಗೆ ಹೇಳಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ತಾವು ಉತ್ತರ ಕಳುಹಿಸಿದ್ದೀರಿ, ನಿಮ್ಮ reply copy ಯಲ್ಲಿ ಸುಮಾರು 1,091 ದೃಢೀಕೃತ ಡೆಂಗ್ಯು ಪ್ರಕರಣಗಳಿವೆ. 10 ಸಾವುಗಳಾಗಿವೆ ಎಂದು ಹೇಳಿದ್ದೀರಿ. ಅಂದರೆ, ಕಳೆದ 6 ತಿಂಗಳಲ್ಲಿ ಇದು ಆಗಿದೆ. ರಾಜ್ಯಾದ್ಯಂತ ಈ ತರಹ ಇದೆ. ದಿನನಿತ್ಯ ಪತ್ರಿಕೆಯಲ್ಲಿ ವರದಿಯಾಗುತ್ತಿದೆ. ದಿನ ನಿತ್ಯ ಜನರು, ಮಕ್ಕಳು, ಬಡವರು, ಕೂಲಿ ಕಾರ್ಮಿಕರು ಈ ಜ್ವರಕ್ಕೆ ತುತ್ತಾಗುತ್ತಿದ್ದಾರೆ ಇದರ ಬಗ್ಗೆ ಕಠಿಣವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಜ್ವರಕ್ಕೆ ಕಾರಣವಾಗುವ ಯಾವುದೋ ಜಾತಿಯ ಸೊಳ್ಳೆ ಇದೆಯಲ್ಲ. ಈ ಸೊಳ್ಳೆಯನ್ನು ನಾಶ ಮಾಡಲಿಕ್ಕೆ ರೋಗ ಹರಡದಂತೆ ತಡೆಗಟ್ಟಲಿಕ್ಕೆ ನೀವು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಅನೇಕ ತಿಂಗಳಿನಿಂದ Health Minister ಇಲ್ಲದೆ ಯಾರೂ ಇಲಾಖೆ ನೋಡುವವರಿರಲ್ಲಿಲ್ಲ. ನೀವಾದರೂ Health Minsiter ಆಗಿ ಬಂದಿದ್ದೀರಿ. ಕೂಡಲೇ ಇದರ ಬಗ್ಗೆ ನೀವು ಕಠಿಣವಾದ ಕ್ರಮ ತೆಗೆದುಕೊಂಡು ಇದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಬೇಕು. ಉತ್ತರಕ್ಕೋಸ್ಕರ ಉತ್ತರ ಕೊಡಬೇಡಿ.

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನೆ.ಲ. ನರೇಂದ್ರಬಾಬುರವರು ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಸರ್ಕಾರ ಸಾಕಷ್ಟು ಕ್ರಮವನ್ನು ಕೈಗೊಂಡಿದೆ. ನಾನು ನಿನ್ನೆ ದಾವಣಗೆರೆಯಲ್ಲಿ Review Meeting ಮಾಡಿದೆ. ಅದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂಥ ಸಲಹೆಯನ್ನು ಗಣನೆಗೆ ತೆಗೆದುಕೊಳ್ಳುವುದಾದರೆ, ಇಡೀ ರಾಜ್ಯದಲ್ಲಿ ಸುಮಾರು 3,84,742 ಮನೆಗಳಿವೆ. 3,84,742 ಮನೆಗಳ ಪೈಕಿ 3,23,579 ಮನೆ Larva ಸಮೀಕ್ಷೆ ಮಾಡಿದ್ದಾರೆ. ಅಂದರೆ ಟೀಂ ಮಾಡಿ, ಪ್ರತಿ ಟೀಂ ಅನ್ನು ಲೀಡ್ ಮಾಡಿ ಪ್ರತಿ ತಾಲ್ಲೂಕಿನಲ್ಲಿ Larva test ಮಾಡಿದ್ದಾರೆ. 29,853 Larva ಪ್ರಕರಣಗಳು ಗಮನಕ್ಕೆ ಬಂದಿವೆ. ಅದರ ಮೇಲೆ ಕ್ರಮ ಜರುಗಿಸಿದ್ದಾರೆ.

ಅದೇ ತರಹ ಎಲ್ಲಾ ಜಿಲ್ಲೆಗಳಲ್ಲೂ ಆಗಿದೆ, ನಾನು ಉದಾಹರಣೆಗೆ ಹೇಳುತ್ತಿದ್ದೇನೆ. 383 ಶಂಕಿತ ಪ್ರಕರಣಗಳಿದ್ದು ಅದರಲ್ಲಿ positive ಆಗಿ ಬಂದಿರುವುದು 149. ಆ 149 ಪ್ರಕರಣಗಳಲ್ಲೂ treatment ಕೊಡುವ ಪ್ರಯತ್ನವಾಗಿದೆ. ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಡೆಂಗ್ಯು ಜ್ವರಕ್ಕೆ ತುತ್ತಾದವರು private hospitals ಗೆ ಹೋಗಿ ಸೇರುತ್ತಾರೆ. ಏಕೆಂದರೆ, ನಾವು ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಅವರು ತಮಗೆ ಯಾರು ಒಳ್ಳೆಯ ಡಾಕ್ಟರ್ ಎಂದು ಅನಿಸುತ್ತದೆಯೇ ಆ ಡಾಕ್ಟರ್ ಹತ್ತಿರ ಹೋಗಿ ಅವರ ಆಸ್ಪತ್ರೆಯಲ್ಲಿ ಆಡ್ಮಿಟ್ ಆಗುತ್ತಾರೆ. ಹಾಗಾಗಿ, ಆ ಡಾಕ್ಟರ್ ಅವರನ್ನು ಸರಿಯಾಗಿ ಟ್ರೀಟ್ ಮಾಡದಿದ್ದರೆ ಕಷ್ಟ. ಉದಾಹರಣೆಗೆ 10 ಸಾವಾಗಿರುವ ಪೈಕಿ 9 ಸಾವು ಆಗಿರುವುದು private hospitals ನಲ್ಲಿಯೇ. ಅದರರ್ಥ ನಮ್ಮ ಜವಾಬ್ದಾರಿ ಇಲ್ಲವೆಂದು ನಾನು ಹೇಳುತ್ತಿಲ್ಲ. ನಮ್ಮ ಅಧಿಕಾರಿಗಳ Review Meeting ಮಾಡಿ, private hospital, Government Hospital ಇರಲಿ ಆ ರೋಗಿ ಎಲ್ಲೆಲ್ಲಿದ್ದಾನೆ ಅವನನ್ನು monitor ಮಾಡಿ ಎನ್ನುವ instructions ಕೊಟ್ಟಿದ್ದೇವೆ. ಹಾಸನ ಮತ್ತು ದಾವಣಗೆರೆ ಜಿಲ್ಲೆಗಳ ಉದಾಹರಣೆ ಕೊಟ್ಟೆ. ಇದೇ ತರಹ ಎಲ್ಲ ಜಿಲ್ಲೆಗಳಲ್ಲೂ ಕೂಡ Larva ಸಮೀಕ್ಷೆ ಮಾಡಬೇಕೆನ್ನುವ ಆದೇಶ ಕೊಟ್ಟಿದ್ದೇನೆ. ನಾಳೆ ಬೆಂಗಳೂರಿನ ಎಲ್ಲ ಆಸ್ಪತ್ರೆಗಳವರ ಸಭೆಯನ್ನು ಕರೆದಿದ್ದೇನೆ. ಅದೇರೀತಿ ಈಗೇನು ಪ್ರಕರಣಗಳು ದಾಖಲಾಗಿವೆ, ಆ ರೀತಿ ದಾಖಲಾಗಿರುವಂಥ ಕಡೆಗಳಲ್ಲಿ platelets ಇದೆಯೇ ಎನ್ನುವುದನ್ನೂ ಕೂಡ ಚೆಕ್ ಮಾಡಲಾಗಿದೆ. Blood Bank ನಲ್ಲಿ blood ಸಾಕಷ್ಟು available ಇದೆ. Platelets ಕೂಡ available ಇದೆ. ಹೀಗಾಗಿ, ಯಾವುದೇ ತೊಂದರೆ ಇಲ್ಲ. ಆದರೆ, awareness ನ ಕೊರತೆ ಇದೆ. ಜನಸಾಮಾನ್ಯರ ಹತ್ತಿರ ಹೋಗಿ ಈ ಬಗ್ಗೆ ತಿಳಿಸಿ, ಆ awareness ತರುವಂಥ ಕೆಲಸವನ್ನು ನಾವಿನ್ನೂ ಜಾಸ್ತಿ ಮಾಡುತ್ತಿದ್ದೇನೆ. ಅದಕ್ಕೆ ನಮಗೆ ಇನ್ನೂ ಸಾಕಷ್ಟು force ಬೇಕಾಗುತ್ತದೆ. Para Medical Course, Nursing Course ಮಾಡುತ್ತಿರತಕ್ಕಂಥ ವಿದ್ಯಾರ್ಥಿಗಳನ್ನೂ ಕೂಡ ಇದರಲ್ಲಿ involve ಮಾಡಿಕೊಂಡು ಇಡೀ ರಾಜ್ಯದಲ್ಲಿ ಇದರ campaign ಅನ್ನು

ತೆಗೆದುಕೊಂಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದು ಬಹಳ ಅಮೂಲ್ಯವಾದ ಸಲಹೆ. ಏಕೆಂದರೆ, ಇದನ್ನು war-footing ನಲ್ಲಿ ಮಾಡಬೇಕಾಗಿದೆ. ಬರುವ ದಿನಗಳಲ್ಲಿ ಇದನ್ನು ಮಟ್ಟ ಹಾಕುವ ಕೆಲಸವನ್ನು ಸರ್ಕಾರ ಮಾಡುತ್ತದೆನ್ನುವ ಭರವಸೆ ಕೊಡುತ್ತೇನೆ. ಬೆಂಗಳೂರು ವಿಷಯವಾಗಿ ನರೇಂದ್ರಬಾಬುರವರು Zero Hour ನಲ್ಲಿ ಗಮನಸೆಳೆದಿದ್ದಾರೆ. ನಮಗೆ ಬೆಂಗಳೂರಿನಲ್ಲಿ BBMP ಯಿಂದ ಸ್ವಚ್ಛತೆಯಲ್ಲಿ ಬಹಳ ದೊಡ್ಡ ಸಮಸ್ಯೆಯಾಗಿದೆ. ಅದು ತಮಗೂ ಗೊತ್ತಿದೆ. ಅಲ್ಲಿನ problems ನಿಂದ ನಗರದ ಸ್ವಚ್ಛತೆಯನ್ನು ದೊಡ್ಡ ಸಮಸ್ಯೆ ಇದೆ. ಮಾನ್ಯ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ. ಅವರು ಹಿಂದೆ ಆರೋಗ್ಯ ಸಚಿವರೂ ಆಗಿದ್ದರು. ಈ ಸಮಸ್ಯೆಯ ಅರಿವು ಅವರಿಗೂ ಇದೆ. ತಕ್ಷಣದಲ್ಲೇ BBMP ಸಭೆ ಕರೆದು ಅಲ್ಲಿಯೂ ಇದನ್ನು ಇತ್ಯರ್ಥ ಮಾಡಬೇಕು. ಅವರು ಇದರಲ್ಲಿ ಇಳಿಯದಿದ್ದರೆ ಇದು ನಗರದಲ್ಲಿ control ಗೆ ಬರುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಸರ್ಕಾರ ಈ ಕ್ರಮ ಜರುಗಿಸವುದಕ್ಕೆ ಸಿದ್ಧವಾಗಿದೆ. ಮಾನ್ಯ ಮುಖ್ಯಮಂತ್ರಿಯವರು, ಸಚಿವರ ಜೊತೆ ಇದಕ್ಕೆ ಸಂಬಂಧಪಟ್ಟಹಾಗೆ ಚರ್ಚೆ ಮಾಡಿ ಮಾನ್ಯ ಗೃಹ ಸಚಿವರ ಜೊತೆ ಚರ್ಚೆ ಮಾಡಿ, ನಾವಿಬ್ಬರೂ ಸೇರಿ ಅದನ್ನು ಇತ್ಯರ್ಥ ಮಾಡುವ ಕೆಲಸ ಮಾಡುತ್ತೇವೆ.

ಅಧ್ಯಕ್ಷರು : ಇದು ಶೂನ್ಯವೇಳೆ, ಹಾಗೆ ಅವಕಾಶವಿಲ್ಲ. ತಾವು ಕುಳಿತುಕೊಳ್ಳಿ

ಶ್ರೀ ನೆ.ಲ. ನರೇಂದ್ರಬಾಬು : ಮೂಲಕ್ಕೆ ಕೈಹಾಕದೇ ಹೋದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಇವತ್ತು ನಗರದ ಸಚಿವರುಗಳು ಇದ್ದೀರಿ. ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿ. Segregation of garbage source ಕಡ್ಡಾಯ ಮಾಡದೇ ಹೋದರೆ ಕಸವನ್ನು ಸುತ್ತಮುತ್ತ ಇರುವ ರೈತರು ತೆಗೆದುಕೊಳ್ಳುವುದಿಲ್ಲ. ಇದನ್ನು ದಯವಿಟ್ಟು ಕಡ್ಡಾಯ ಮಾಡಿ, ಅನುಷ್ಠಾನ ಮಾಡದೇ ಹೋದರೆ ಕಷ್ಟ. ಸಮರ್ಪಕವಾಗಿ ಏಲೇ ಆಗುವುದಿಲ್ಲ. ಸರ್ಕಾರ platelets ಅನ್ನು ಉಚಿತವಾಗಿ ಕೊಡಬೇಕು. ಮಧ್ಯಮ ವರ್ಗ ಮತ್ತು ಬಡವರಿಗೆ ಬಂದರೆ ಬಹಳ ಕಷ್ಟವಿದೆ. ಸರ್ಕಾರದ

ಜವಾಬ್ದಾರಿ ವಹಿಸಿಕೊಳ್ಳಬೇಕು. ತಾವು ಆರೋಗ್ಯ ಸಚಿವರು ಜವಾಬ್ದಾರಿ ವಹಿಸುತ್ತೇನೆಂದು ವಾಗ್ದಾನ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ.ಬಿ. ಪಾಟೀಲ್ (ಬಬಲೇಶ್ವರ) : ದಯವಿಟ್ಟು ನನ್ನದೊಂದು suggestion ಈ Dengue ಮತ್ತು AIDS ಏನಿದೆ ಇದರ prevention ಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. Most importantly ಇದು Dengue ಬರುವುದು stagnant water ದಿಂದ. ದೆಹಲಿಯದೇ ಒಂದು ಉದಾಹರಣೆ. ದೆಹಲಿಯಲ್ಲಿ ಅದಕ್ಕೆ ಯಾವ ರೀತಿಯಾಗಿ prevention ಗೆ ಮಹತ್ವ ಕೊಡುತ್ತಾರೆ. advertisement ಮೂಲಕ ನೀರು stagnCnt ಆಗಿ ಇರಬಾರದು. water coolers ಇನ್ನಿತರ ಕಡೆ ಎಲ್ಲಿ water stagnant ಆಗುತ್ತದೆ. drainage ನಲ್ಲಿ stagnant water ಎಲ್ಲಿ ಇರುತ್ತದೆ ಅಲ್ಲಿ prevention ಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಅದರ ಬಗ್ಗೆ wide publicity ಕೊಡಬೇಕಾಗುತ್ತದೆ. BBMP ಮತ್ತು ಇನ್ನಿತರ agency ಗಳು ಬಹಳ ಸಮರ್ಥವಾಗಿ ಕೆಲಸ ಮಾಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ prevention ಬಗ್ಗೆ ಆರೋಗ್ಯ ಸಚಿವರು ಸ್ವಲ್ಪ ಹೇಳಬೇಕಾಗುತ್ತದೆ.

ಶ್ರೀ ಹೆಚ್. ಹಾಲಪ್ಪ (ಸೊರಬ) : Dengue ಜ್ವರದಿಂದಾಗಿ ನನ್ನ ಕ್ಷೇತ್ರದಲ್ಲಿ ಎರಡು ಮಕ್ಕಳು ತೀರಿ ಹೋಗಿದ್ದಾರೆ. ಒಂದು ಊರಿನಲ್ಲಿ ಹೆಚ್ಚು ವ್ಯಾಪಕವಾಗಿದೆ. ಆದರ ಬಗ್ಗೆ ನಮ್ಮ ಮಂತ್ರಿಗಳಿಗೆ ಮಾಹಿತಿ ಏನಾದರೂ ಇದೆಯೇ ? ಮಾಹಿತಿ ಇದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದರ ಬಗ್ಗೆ ಬೆಳಕು ಚೆಲ್ಲಬೇಕೆಂದು ತಮ್ಮ ಮೂಲಕ ಅವರಲ್ಲಿ ಮನವಿ ಮಾಡುತ್ತೇನೆ.

ಡಾ॥ ಎ.ಬಿ. ಮಾಲಕರೆಡ್ಡಿ (ಯಾದಗಿರಿ) : ಇದು Mosquito, ಸೊಳ್ಳೆಯಿಂದ ಬರತಕ್ಕಂಥದ್ದು ಇದು ಹೊಲಸು stagnant ನೀರಿನಿಂದ ಬರುವುದಲ್ಲ. ಅದು Malaria ಇದು ಬರತಕ್ಕಂಥದ್ದು Egyptian aegypti ಎನ್ನುವ ಒಂದು variety of mosquito ನಿಂದ. ಈ variety of mosquito ಕಚ್ಚುವುದರಿಂದ ಬರುತ್ತದೆ. ಅದು ಸ್ವಚ್ಛ ನೀರಿನಲ್ಲಿ ಬೆಳೆಯುತ್ತದೆ, ಹೊಲಸು ನೀರಿನಲ್ಲಿ ಅಲ್ಲ ಸ್ವಚ್ಛ ನೀರಿನಲ್ಲಿ ಅದು ಹೇಗೆ

ಎಂದರೆ, ಈ ತೆಂಗಿನಕಾಯಿ ಒಡೆದಾಗ ಅದರ ಚಿಪ್ಪು ಇರುತ್ತದೆ. ಅದನ್ನು ಹೊರಗಡೆ ಹಾಕಿದಾಗ ಮಳೆಗಾಲ ಇದ್ದಾಗ ಮಳೆ ಬಂದು ಅದರಲ್ಲಿ ನೀರು ನಿಲ್ಲುತ್ತದೆ. ಅದರಲ್ಲಿ ಇದು ಬೆಳೆಯುತ್ತದೆ. ಮತ್ತೆ ಹಾಳಾಗಿರುವ ಮತ್ತು ಡ್ಯಾಮೇಜ್ ಆಗಿರುವ ಟೈರ್ಸ್‌ನ್ನು ಎಸೆಯುತ್ತಾರೆ. ಅದರಲ್ಲಿ ಮಳೆ ಬಂದಾಗ ನೀರು ನಿಂತು ಅಲ್ಲಿ ಇದು ಬೆಳೆಯುತ್ತದೆ. ಮನೆಯ ಮೇಲೆ ಕೆಲವು ಬೋಕಿ ಇರುತ್ತದೆ. ಕೆಲವು ಪ್ಲಾಸ್ಟಿಕ್ ಬಕೀಟ್ ಎಸೆದಿರುತ್ತೇವೆ. ಅದರಲ್ಲಿ ಮಳೆ ಬಂದಾಗ ನೀರು ನಿಂತು ಅಲ್ಲಿ ಇದು ಬೆಳೆಯುತ್ತದೆ. ಇದು ಹೊಲಸು stagnate ನೀರಿನಿಂದ ಬರತಕ್ಕಂಥದ್ದಲ್ಲ. ಇದು ಸ್ವಚ್ಛ ನೀರಿನಲ್ಲಿ ಬೆಳೆಯತಕ್ಕಂಥ Mosquito. Air cooler ಇಂಥ ಕಡೆಗಳಲ್ಲಿ ನಿಂತ ನೀರಿನಲ್ಲಿ ಬೆಳೆಯುತ್ತದೆ. Dengue Fever and H-1 N-1 ಎಂದು ಒಂದರೆಡು ವರ್ಷದ ಹಿಂದೆ ಬೆಂಗಳೂರಿನಲ್ಲಿ ಬಹಳವಾಗಿ ಹಬ್ಬಿತ್ತು. ಈ ಎರಡು ಒಂದೇ variety ಆ ಕ್ರಿಮಿಗಳು ಕಚ್ಚುವುದರಿಂದ ಬರುತ್ತವೆ. ಅಂದರೆ ಈ ಬಗ್ಗೆ prevention ಏನೆಂದರೆ eradication of mosquito ಮತ್ತು awareness ಮುಖ್ಯ ಮೊದಲನೆಯದು Mosqutio Net ಉಪಯೋಗಿಸಬೇಕು. ಎರಡನೇಯದಾಗಿ spray ಮಾಡುವುದು ಆ seasonನಲ್ಲಿ intense spray ಮಾಡಬೇಕು. Spray ಮಾಡುವುದರಿಂದ ಅದು ಹೋಗುತ್ತದೆ. ಸಾಮಾನ್ಯವಾಗಿ spray material user ಅನ್ನು British ಕಾಲದಿಂದಲೂ Central Government ನಿಂದ supply ಮಾಡುತ್ತಿದ್ದರು. ಅದನ್ನು State Government ಮಾಡುತ್ತಿರಲಿಲ್ಲ. It is centralized supply ಇತ್ತು ಇತ್ತೀಚೆಗೆ ಏನು ಮಾಡಿದ್ದಾರೆಂದರೆ, Central Govenment ನಿಂದ supply ಮಾಡತಕ್ಕಂಥದ್ದು ಸ್ವಲ್ಪ ಕಡಿಮೆಯಾಗಿದೆ. It is overlapped in the last decade or so. ಆದರೂ ಕೂಡ ಅದೇನು ದೊಡ್ಡ ಕಿಮ್ಮತ್ತಿನ ಔಷಧಿ ಅಲ್ಲ. State Government ನವರೂ ಕೂಡ ನಾನು Health Minister ಇದ್ದಾಗ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ಇದನ್ನು spray ಮಾಡತಕ್ಕಂಥದ್ದು ಮಾಡಿದೆ. ಇದು seasonal spray. That is very very important.

Seasonally spray ಮಾಡುವುದರಿಂದ ಇದನ್ನು control ಮಾಡಬಹುದು.

ಶ್ರೀ ದಿನೇಶ್ ಗುಂಡುರಾವ್ : ಇದರಲ್ಲಿ Health Minister ಗಿಂತ ಹೆಚ್ಚಿನ ಜವಾಬ್ದಾರಿ BBMP ಮತ್ತು ಆ ಇಲಾಖೆಗಳಿಗಿದೆ. ಏಕೆಂದರೆ ಜನಗಳು ಆರೋಗ್ಯ ಕೆಟ್ಟ ಮೇಲೆ ಆಸ್ಪತ್ರೆಗಳಿಗೆ ಹೋಗುತ್ತಾರೆ. ಹೀಗಾಗಿ ಆರೋಗ್ಯ ಕೆಡುವುದಕ್ಕೆ ಮುಂಚೆ ನಾವು ಇದರಲ್ಲಿ ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕಾತ್ತುದೆ. ಅದಕೋಸ್ಕರ ಮಾನ್ಯ ಅಶೋಕ್‌ರವರು ಸುರೇಶ್ ಕುಮಾರ್‌ರವರು, ಇವೆಲ್ಲರೂ ಇದ್ದಾರೆ. BBMP ಅಧಿಕಾರಿಗಳನ್ನು ಕರೆಸಿ ಬಹಳ ಕಟ್ಟನಿಟ್ಟಾಗಿ ಕ್ರಮ ಜರುಗಿಸುವಂಥದ್ದು ಮಾಡಬೇಕು ಮತ್ತು ಮಾನ್ಯ ಎಂ.ಬಿ. ಪಾಟೀಲ್‌ರವರು ಹೇಳಿದ ಹಾಗೆ ಅದರ ಬಗ್ಗೆ ಹೆಚ್ಚು ಮಾಹಿತಿ ಜನರಿಗೆ ಕೊಡಬೇಕಾಗುತ್ತದೆ. ಮಾಹಿತಿ ಇಲ್ಲದೇ ಹೋದರೆ ಕಷ್ಟ ಮೊದಲೇ ಇದನ್ನು prevent ಮಾಡಿಬಿಟ್ಟರೆ ಆಗ ಆ ಕಾಯಿಲೆ ಬರುವುದಿಲ್ಲ. ಆಗ ನಾವು ಆಸ್ಪತ್ರೆಗಳಿಗೆ ಹೋಗುವುದು ಬೇಕಾಗಿಲ್ಲ. ಆದ್ದರಿಂದ ತಾವು ಬೆಂಗಳೂರಿನ ಶಾಸಕರು ಹಾಗೂ ಸಚಿವರು ಇದ್ದೀರಿ, ಇದರ ಬಗ್ಗೆ ತಾವು serious ಆಗಿ ಕಾರ್ಯಕ್ರಮ ಮಾಡಬೇಕಾಗುತ್ತದೆ.

ಡಾ: ಹೆಚ್.ಸಿ. ಮಹದೇವಪ್ಪ (ಟಿ.ನರಸೀಪುರ).: Zero Hour ನಲ್ಲಿ ಹೆಚ್ಚು interfere ಮಾದಬಾರದು. ಆದರೆ, ಇದು ತುಂಬಾ ಮಹತ್ತರ ವಿಷಯವಾಗಿರುವುದರಿಂದ ಸರಕಾರಕ್ಕೆ ನಾನು ಸಲಹೆ ಕೊಡುವುದಕ್ಕೆ ಇಷ್ಟಪಡುವುದೇನೆಂದರೆ, ರಾಜ್ಯ ಮಟ್ಟದಲ್ಲಿ ಒಂದು Surveillance Unit ಅನ್ನು establish ಮಾಡಿದ್ದಾರೆ. ಅದು TB Hospital ಹತ್ತಿರ ವ್ಯವಸ್ಥೆ ಮಾಡಿ ಯಾವ್ಯಾವ ಕಾಲದಲ್ಲಿ ಯಾವ್ಯಾವ ಪ್ರದೇಶದಲ್ಲಿ ಏನೇನು ಖಾಯಿಲೆಗಳು ಹರಡಬಹುದು ಎನ್ನತಕ್ಕಂಥದ್ದು. It is called as Surveillance Unit. ಅದಕ್ಕೆ ಒಬ್ಬ Additional Director ಅನ್ನು post ಮಾಡಿರುತ್ತಾರೆ. Additional Director post ಇದೆಯೋ ಇಲ್ಲವೋ ನೋಡಿಕೊಳ್ಳಿ. ಮತ್ತೆ Programme Officers to control, to implement the national programme and to control the vector and vector-borne diseases. ಇದು ಎರಡನೆಯದು.

ಮೂರನೆಯದು Corporation ವ್ಯಾಪ್ತಿಯಲ್ಲಿ population ಒಂದು ಕೋಟಿ ಇದೆ. ಒಂದು ಕೋಟಿ ಇರುವಾಗ Corporation ನಲ್ಲಿ there is no Health bye-law. ಡಾ: ಮಾಲಕರೆಡ್ಡಿಯವರು ಈಗ ಹೇಳಿದ್ದೇನು, ಟೈರ್ ಪಂಕ್ಚರ್ ಹಾಕುವ ಅಂಗಡಿ ಇಟ್ಟಿರುತ್ತಾನೆ, ಹಳೆಯ ಟೈರ್ ಬಿಸಾಕಿ ಬಿಟ್ಟರೆ ಅಲ್ಲಿ ನಾಯಿ ನಂಬರ್ ಒನ್ ಮಾಡಿದರೂ ಅದು ಶುದ್ಧವಾಗಿರುವ ನೀರು, ಅಲ್ಲೂ Mosquito breed ಆಗುತ್ತದೆ. ಎಳನೀರು ಕುಡಿದು ಬಿಸಾಕಿಬಿಟ್ಟರೆ ಮಳೆ ಬಂದರೆ ಅಲ್ಲಿಯೂ ನೀರು ನಿಂತು ಬೆಳೆಯುತ್ತದೆ. That means to say, ಹೋಟೆಲ್‌ಗಳನ್ನು ಮಾಡತಕ್ಕಂಥವರು, ತರಕಾರಿ ಮಾರತಕ್ಕಂಥವರು ಯಾರ್ಯಾರು ಈ ತರಹದ ವ್ಯಾಪಾರ ವಹಿವಾಟು ಮಾಡುತ್ತಾರೆ. ಇವರೆಲ್ಲರೂ ಕೂಡ, they should contribute Health promote ಮಾಡುವುದಕ್ಕೆ disease ಅನ್ನು prevent ಮಾಡುವುದಕ್ಕೆ ಅವರು contribute ಮಾಡಬೇಕು. ಅದಕ್ಕೆ Health by law is a must.

The Health Department as well as the corporation must sit together and bring in a bye law ಜನರಿಗೆ responsibility ಇರಬೇಕು. in preventing the diseases and in promoting the health. ಅದನ್ನು ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ. ರೋಗ ಬಂತು ರೋಗಕ್ಕೆ ಔಷಧಿ ಇದೆ. ನಾವು platelets ಕೊಡುತ್ತೇವೆ. blood ಕೊಡುತ್ತೇವೆ ಎನ್ನುವುದು that is the later part. Surveillance Unit ಇದೆ. ಕಾಯಿಲೆ ಯಾವಾಗ ಎಲ್ಲಿ ಬರುತ್ತದೆ, Mosquito breed ಆಗುವ time ಯಾವುದು ಎಲ್ಲಿ spread ಆಗುತ್ತದೆ. ಎಲ್ಲೆಲ್ಲಿ ಮಳೆ ಬರುತ್ತದೆ ಎಲ್ಲೆಲ್ಲಿ ಈ ತರಹದ ವಾತಾವರಣ ಹಾಳು ಮಾಡುವುದಕ್ಕೆ ಇದೆ. ಇದನ್ನೆಲ್ಲಾ ನೀವು list out ಮಾಡಿ corporation ರವರು incorporate ಮಾಡಿಕೊಂಡು bye-law ಮಾಡಿ ನೀವು ಮಾಡಿದರೆ you can prevent, because

Bangalore is the centre for spreading the communicable diseases. ಇಲ್ಲಿಯ ವಾತಾವರಣ ಇಲ್ಲಿಯ garbage, ಇಲ್ಲಿಯ ಕುಡಿಯುವ ನೀರು ಮತ್ತು wastage ಇವೆಲ್ಲಾ ಬೇರೆ ಬೇರೆ ಕಡೆ ಹೋಗಿ ನಾವು ನೋಡಿದರೆ ಇದೆಲ್ಲಾ ನಮಗೆ ಕಾಣುತ್ತದೆ. Though it is an

international city, ನೀವು clean ಮಾಡಿ free from diseases ಮಾಡದೇ ಹೋದರೆ ಕಷ್ಟವಾಗುತ್ತದೆ. ಅದಕ್ಕೆ health is a vital aspect ಅದನ್ನು ನೀವು ಮಾಡಬೇಕು ಮತ್ತು ನೀವು ಆದರ ಮೂಲಕ ಎಲ್ಲಾ Programme Officers ಇದ್ದಾರೋ ಇಲ್ಲವೋ ಎಂಬುದನ್ನು ನೋಡಬೇಕು. Majority of the subjects, there is not Programme Officers. Health Director ಅವರೂ ಕೂಡ regular Director ಅಲ್ಲ. Health Secretary ಅವರ Under Secretary, Director-in-charge ಇರುವವರು struggle ಮಾಡಬೇಕು. You please see that Programme Officers are immediately posted. ಖಂಡಿತ ಇಲ್ಲ 100% there is no Programme Officers. So, this is one of the reasons why diseases are spreading. why we are not able to control diseases, why we are not able to promote health. This is the reason. Since past five years the health is really suffering and it is paralyzed. ದಯವಿಟ್ಟು ಇದು ಸೂಕ್ಷ್ಮ ವಿಚಾರ ನಮ್ಮ ಸಲಹೆಗಳನ್ನು ತಾವು ನೋಟ್ ಮಾಡಿಕೊಂಡು ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇದನ್ನು control ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಅರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು) : ಮಾನ್ಯ ದಿನೇಶ್‌ರವರು, ಡಾ॥ಮಹದೇವಪ್ಪನವರು, ಬೆಂಗಳೂರಿನ ಈ ಕಸ ವಿಲೇವಾರಿಯ ಬಗ್ಗೆ cleanliness ಬಗ್ಗೆ ನಮ್ಮ ಗಮನ ಸೆಳೆದಿದ್ದಾರೆ. ಸಮಸ್ಯೆ ಇದೆ ನಿಜ. Dengue ಜ್ವರದ ಬಗ್ಗೆ ಕಸ ವಿಲೇವಾರಿಯ ಬಗ್ಗೆ ಸಭೆ ಕರೆಯಬೇಕೆಂದು ನಿನ್ನೆ ಮಾನ್ಯ ಅರವಿಂದದರವರ ಹತ್ತಿರ ಮಾತನಾಡಿದ್ದೇನೆ. ಬೆಂಗಳೂರಿನಲ್ಲಿ ಕಸ ವಿಲೇವಾರಿಯದು ಇವತ್ತಿನ ಸಮಸೆಯಲ್ಲ, ಬಹಳ ವರ್ಷಗಳಿಂದ ಎದುರಿಸುತ್ತಿದ್ದೇನೆ. ನಮಗೆ ಏನಾಗಿದೆ ಅಂದರೆ dumping yard ಗಳನ್ನು ಇದುವರೆವಿಗೂ ಮಾಡಲಿಕ್ಕಾಗಲಿಲ್ಲ. ಈಗಲೂ ಬಹಳ ಪ್ರಯತ್ನ ಪಟ್ಟು ಬೆಂಗಳೂರಿನ ಸುತ್ತಮುತ್ತ dumping yard ಮಾಡಿದ್ದೇನೆ. ಈ dumping yard ಗಳು ಪ್ರಾರಂಭವಾಗುತ್ತದೆ. ಪ್ರಾರಂಭವಾಗಿ ಅಲ್ಲಿ

ಒಂದು ಸಾರಿ ಕಸ ಹಾಕುವುದಕ್ಕೆ ಶುರು ಮಾಡಿದರೆ ಅದರ ಸುತ್ತ ಬರುವ ಒಂದು ಕಿಲೋಮೀಟರ್‌ನ ದೂರದಲ್ಲಿರುವ ಜನರೆಲ್ಲಾ ಗಲಾಟೆ ಮಾಡಿ ಬಂದ್ ಮಾಡಿಸುತ್ತಿದ್ದಾರೆ. ಹಿಂದೆ 4–5 ಕಡೆ ಮಾಡಿದ್ದೆನು. ಪ್ರತಿ ಕಡೆಯೂ ಅಲ್ಲಿನ ಜನ ಇರಬಹುದು. ಶಾಸಕರಿರಬಹುದು. ಅಲ್ಲಿ ಕಸ ಹೋಗದೆ ಹಾಗೆ ಮಾಡುತ್ತಾರೆ. ಸಮಸ್ಯೆ ಇದೆ. ಇದರ ಬಗ್ಗೆ ಒಂದು ವಿಶೇಷವಾದ ಸಭೆ ಕರೆಯಬೇಕಾಗುತ್ತದೆ. ಏಕೆಂದರೆ, ನಮ್ಮ ದಿನೇಶ್ ಮತ್ತು ಬೆಂಗಳೂರಿನ ಎಲ್ಲಾ ಶಾಸಕರು ಇದ್ದಾರೆ. ಅವರನ್ನೆಲ್ಲಾ ಕರೆದು ಈ dumping yard and Dengue Fever ಬಗ್ಗೆ ವಿಶೇಷ ಸಭೆ ಕರೆಯುತ್ತೇವೆ. ಇದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. Sorry, ನೀವು, ಇದ್ದೀರಿ ನಿಮ್ಮದೊಂದು question ಇತ್ತು ನಿಮ್ಮ ಹೆಸರು ಹೇಳಲಿಲ್ಲ. ನಿಮ್ಮನ್ನೆಲ್ಲ ಕರೆದು ಮಾತನಾಡುತ್ತೇನೆ.

ಶ್ರೀ ಎನ್.ಎ. ಹ್ಯಾರೀಸ್ : Garbage ತೆಗೆಯಲಿಕ್ಕೆ tender ಕರೆದು ಏನೂ ಮಾಡದೇ ನೀವು ಹಾಗೆಯೇ ಇಟ್ಟಿದ್ದೀರಿ.

ಶ್ರೀ ಆರ್. ಅಶೋಕ್ : Tender process Court ನಲ್ಲಿದೆ, ಆದಾದ ಮೇಲೆ ಮಾಡುತ್ತೇವೆ.

ಶ್ರೀ ವೈ.ಎನ್. ರುದ್ರೇಶ್ ಗೌಡ : ಎಲ್ಲಾ ತಾಲ್ಲೂಕು headquarters ನಲ್ಲೂ ಸಹ ಈ ಒಂದು wastage ಹಾಕುವುದು ಏನಿದೆ ಇದೊಂದು problem ಇದ್ದೇ ಇದೆ.

ಅಧ್ಯಕ್ಷರು : Please, ನಾನು ಚಂದ್ರಶೇಖರ್‌ರವರನ್ನು ಕರೆದರೆ ತಾವು ಅನುಮತಿ ಕೇಳದೇ ಪ್ರತಿಬಾರಿ ಎದ್ದು ನಿಂತು ಮಾತನಾಡುತ್ತೀರಿ. ಅದು ದಾಖಲೆಗೆ ಹೋಗಬಾರದು.

ಶ್ರೀ ಕೆ.ಬಿ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಯಶಸ್ವಿನಿ. ಯೋಜನೆ ಎನ್ನತಕ್ಕಂಥ ಒಂದು ಕಾರ್ಯಕ್ರಮ ಬಹಳ ಅರ್ಥಗರ್ಭಿತವಾಗಿ ನಡೆಯುತ್ತಿರುವುದು ನಮಗೆಲ್ಲರಿಗೂ ಸಹ ಗೊತ್ತಿದೆ. ಆದರೆ, ಅದು ಕೆಲವು ಕಾಯಿಲೆಗಳಿಗೆ ಮಾತ್ರ ಸೀಮಿತವಾಗಿರುವುದು ತಿಳಿದು ಬಂದಿದೆ.

ಅಧ್ಯಕ್ಷರು : ಆ ವಿಷಯಕ್ಕೆ ಇದು ಸಂಬಂಧಪಡುವುದಿಲ್ಲ. ಆದ್ದರಿಂದ ತಾವು ಬೇಡಿಕೆ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಇದನ್ನು ಹೇಳಿ. ಡೆಂಗ್ಯೂ ಜ್ವರಕ್ಕೂ ಇದಕ್ಕೂ ಏನು ಸಂಬಂಧ? ಡಿಮಾಂಡ್ಸ್ ಬಗ್ಗೆ ಮಾತನಾಡುವಾಗ ಇದನ್ನು ಹೇಳಿ.

ಶ್ರೀ ಕೆ.ಬಿ. ಚಂದ್ರಶೇಖರ್ : ಆಯಿತು.

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು) : ಮಾನ್ಯ ಪಾಟೀಲ್‌ರವರು, ಮಾನ್ಯ ಹಾಲಪ್ಪನವರು, ಡಾ॥ ಮಾಲಕರೆಡ್ಡಿಯವರು, ಶ್ರೀ ದಿನೇಶ್ ಗುಂಡೂರಾವ್‌ರವರು, ಡಾ॥ ಮಹದೇವಪ್ಪನವರು ಇದರ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಸಲಹೆಗಳನ್ನು ನಿಶ್ಚಿತವಾಗಿ ಗಣನೆಗೆ ತೆಗೆದುಕೊಂಡು ಅದನ್ನು effective ಆಗಿ implement ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಅಶೋಕ್‌ರವರು ಹೇಳಿದಂತೆ ಬೆಂಗಳೂರು ವಿಚಾರದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅವರ ಜೊತೆ ಸೇರಿ ಬೆಂಗಳೂರಿನ ಶಾಸಕರ ಜೊತೆ ಒಂದು ಸಭೆ ಮಾಡಿ ಅತಿ ಶೀಘ್ರದಲ್ಲಿ ಇತ್ಯರ್ಥ ಆಗುವಂಥ ಒಂದು ಪ್ರಯತ್ನವನ್ನು ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಇಡೀ ಸದನಕ್ಕೆ request ಮಾಡಿಕೊಳ್ಳುದೇನೆಂದರೆ, ನಿಮ್ಮ ಕ್ಷೇತ್ರಗಳಲ್ಲಿ ಇದು ಸ್ಪೆಡ್ ಆಗುವಂಥ ಸಂದರ್ಭದಲ್ಲಿ ಶಾಸಕರು ಮಾತು ಎಂದರೆ ಅದನ್ನು ಬಹಳ ಮಹತ್ವವಾಗಿ ಜನರು ಗಣನೆಗೆ ತೆಗೆದುಕೊಳ್ಳುತ್ತಾರೆ. ಸ್ವಚ್ಛತೆ ಮತ್ತು ಇತರೇ ವಿಷಯದ ಬಗ್ಗೆ ಡಾ॥ ಮಾಲಕರೆಡ್ಡಿಯವರು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯಕ್ಕೆಲ್ಲ ನಾನು ಉತ್ತರದಲ್ಲಿ ಹೇಳಿದ್ದೇನೆ. ಆದರೆ, ನಿಮ್ಮ ಕ್ಷೇತ್ರಗಳನ್ನು ಇದು ಸ್ಪಿಡ್ ಆಗುವಂಥ ಸಂದರ್ಭದಲ್ಲಿ ಈ ವಿಷಯಗಳ ಬಗ್ಗೆ ಜನರಿಗೆ ತಾವುಗಳು ಭಾಷಣ ಅಥವಾ ಮಾತಿನಲ್ಲಿ ಹೇಳಿ ಇದರ ಬಗ್ಗೆ ಅರಿವು ಮೂಡಿಸುವಂಥ ಕೆಲಸವನ್ನು ಶಾಸಕರು ಮಾಡಿದ್ದರೆ ರಾಜ್ಯದ ಆರೋಗ್ಯದ ದೃಷ್ಟಿಯಿಂದ ಹೆಚ್ಚು ಉಪಯೋಗವಾಗುತ್ತದೆಂಬುದು ನನ್ನ ಭಾವನೆ ಮತ್ತು ಸಲಹೆ ಆಗಿದೆ. ಆದ್ದರಿಂದ, ದಯವಿಟ್ಟು ಇದನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.